ಅದು ನಿಜಕ್ಕೂ ಭೋಪಾಲ ಅನಿಲ ದುರಂತದ ಟ್ರೇಲರ್ ಇದ್ದಂತಿತ್ತು. ಸರಿರಾತ್ರಿ ಮೂರು ಗಂಟೆಗೆ ಕಾರ್ಖಾನೆಯಲ್ಲಿ ಸ್ಟೈರೀನ್ ದ್ರವ ತುಂಬಿದ್ದ ಬೃಹತ್ ಪೀಪಾಯಿಯ ಬಿರಡೆ ಕಿತ್ತು ಬಂತು. ಪ್ರೆಶರ್ ಕುಕರ್‌ನಿಂದ ಹೊರಬರುವ ಹಬೆಯಂತೆ ಅನಿಲ ರೂಪದ ಸ್ಟೈರಿನ್ ಹೊರಕ್ಕೆ ಸೂಸತೊಡಗಿತು. ಅರ್ಧ ಕಿಲೊಮೀಟರ್ ದೂರದಲ್ಲಿದ್ದ ಮನೆಗಳಿಗೆ ಅನಿಲ ನುಗ್ಗಿತು. ಕೆಮ್ಮುತ್ತ ನಿದ್ದೆಯಿಂದೆದ್ದ ಜನರು ಅತ್ತಿತ್ತ ಓಡುತ್ತ ಏದುಸಿರಿನಿಂದ ಬಸವಳಿದು ಬಿದ್ದರು. ಬಾಲ್ಕನಿಯ ಮೂಲಕ ಜಿಗಿದವರೇನು, ಬೇಲಿ ಜಿಗಿದು ಕತ್ತಲಲ್ಲಿ ಓಟ ಕಿತ್ತವರೇನು, ಸ್ಕೂಟರ್ ಏರಿ ದೂರ ಧಾವಿಸಲು ಯತ್ನಿಸಿದವರೇನು, ಆಟೊ ಹತ್ತಿ ಪಾರಾಗಲು ಹೊರಟವರೇನು; ಎಲ್ಲೂ ಧಾವಿಸಲಾಗದೆ ಕಣ್ಣಿಗೆ ಕತ್ತಲು ಕವಿದು ಕೂತಲ್ಲೇ ಪ್ರಜ್ಞೆ ತಪ್ಪಿ ಬಿದ್ದವರೇನು. ಓಡಲು ಯತ್ನಿಸಿ ತಲೆಸುತ್ತಿ ಬಂದು ನೆಲಕಚ್ಚಿ ಕೂತವರೇನು...

ವಿಶಾಖಪಟ್ಟಣದ ಸರಹದ್ದಿನಲ್ಲಿರುವ ಆರ್‌ಆರ್ ವೆಂಕಟಾಪುರಂ ಸುತ್ತಮುತ್ತಲಿನ ತಾಣವೆಲ್ಲ ಬೆಳಕು ಹರಿಯುವುದರಲ್ಲಿ ಕುರುಕ್ಷೇತ್ರವಾಗಿತ್ತು. ಯೋಧರು, ಪೊಲೀಸರು, ಸ್ವಯಂಸೇವಕರು, ತಾಂತ್ರಿಕ ತಜ್ಞರು ಬೇರೆ ಬಗೆಯ ಮುಖವಾಡ ಧರಿಸಿ ನೆರವಿಗೆ ಧಾವಿಸಿ ಬಂದಿದ್ದರು. ಆಂಬುಲೆನ್ಸ್‌ಗಳು, ಅಗ್ನಿಶಾಮಕ ವಾಹನಗಳು, ಬಸ್, ಟೆಂಪೊ, ಲಾರಿಗಳಲ್ಲಿ ಪ್ರಜ್ಞಾಹೀನರನ್ನು, ಕಕ್ಕಾಬಿಕ್ಕಿಯಾಗಿ ಕೂತವರನ್ನು, ಬಿಕ್ಕಿಬಿಕ್ಕಿ ಅಳುವವರನ್ನು ಎತ್ತಿ ದೂರ ಸಾಗಿಸುವ ಕೆಲಸ ಆರಂಭವಾಗಿತ್ತು. ಶವಗಳನ್ನು ಹುಡುಕುತ್ತ ಓಡುವವರು ಒಂದು ಕಡೆ, ಬರಿಗೈಯಿಂದಲೇ ಕಿಟಕಿ ಗಾಜು ಒಡೆದು ರಕ್ತಸಿಕ್ತ ಕೈಗಳಲ್ಲಿ ಪ್ರಜ್ಞಾಶೂನ್ಯ ದೇಹಗಳನ್ನು ಎತ್ತಿ ದೌಡಾಯಿಸುವವರು ಒಂದು ಕಡೆ; ಅಡ್ಡ ಬಂದ ಮಾಧ್ಯಮಗಳ ಕ್ಯಾಮೆರಾದ ಎದುರು ಮಾತಾಡಲು ಪದಗಳನ್ನು ಹುಡುಕುವವರು ಒಂದು ಕಡೆ. ಸತ್ತು ಬಿದ್ದ ದನಗಳ, ಪಕ್ಷಿಗಳ, ನಾಯಿ ಬೆಕ್ಕುಗಳ ಲೆಕ್ಕ ಮಾಡುವವರು ಇನ್ನೊಂದು ಕಡೆ...

ನಗರದ ಕಿಂಗ್ ಜಾರ್ಜ್ ಆಸ್ಪತ್ರೆಯಲ್ಲಿ ಕೋಲಾಹಲ. ಕೋವಿಡ್19ರ ಕಾಯಿಲೆಗೆಂದು ಬಳಸುತ್ತಿದ್ದ ಮುಖವಾಡವನ್ನು ಬಿಸಾಕಿ ಇನ್ನೊಂದು ಬಗೆಯ ಮುಖವಾಡವನ್ನು ಹುಡುಕುವ ಧಾವಂತ. ಕೊರೊನಾ ರೋಗಿಗಳನ್ನು ಉಳಿಸಲೆಂದು ತರಿಸಿದ್ದ ವೆಂಟಿಲೇಟರ್ಸ್ ಎಂಬ ಕೃತಕ ಉಸಿರಾಟದ ಸಾಧನವನ್ನು ಈ ವಿಷಾನಿಲ ಸಂತ್ರಸ್ತರಿಗೆ ತೊಡಿಸಬೇಕಾದ ಪರಿಸ್ಥಿತಿ.

ಬಾಲ್ಕನಿಯಿಂದ ಜಿಗಿದ ವ್ಯಕ್ತಿಯ ಶವ, ಬಾವಿಗೆ ಬಿದ್ದು ಪ್ರಾಣಬಿಟ್ಟವನ ಶವ, ಸ್ಕೂಟರ್ ಓಡಿಸುವಾಗ ತಲೆತಿರುಗಿ ಪಲ್ಟಿ ಹೊಡೆದು ಬಿದ್ದು ಸತ್ತವರ ಲೆಕ್ಕ, ಆಟೋ ಹಳ್ಳಕ್ಕೆ ಬಿದ್ದು ಸತ್ತವರ ಲೆಕ್ಕ... ಒಟ್ಟೂ ಸಂಖ್ಯೆ ಹೆಚ್ಚೇನಿಲ್ಲ ಸದ್ಯ. ಕೇವಲ ಹನ್ನೊಂದು. ಆದರೂ ಹಳೇ ಪ್ರಕರಣಗಳನ್ನೆಲ್ಲ ಮತ್ತೆ ಪರಿಶೀಲಿಸಲು ಹೊಸ ಅವಕಾಶ.

ಭೋಪಾಲದ ಘಟನೆಯನ್ನು ನೆನಪಿಸಿಕೊಳ್ಳೋಣ. ನಗರದ ಹೊರವಲಯದಲ್ಲಿದ್ದ ಯೂನಿಯನ್ ಕಾರ್ಬೈಡ್ ಕಾರ್ಖಾನೆಯಲ್ಲಿ 1984ರ ಡಿಸೆಂಬರ್ 2ರ ರಾತ್ರಿ ಮೂರು ಗಂಟೆಗೆ ಹೀಗೇ ಆಗಿತ್ತು. ಅದು ವಿರಾಟ್ ಸ್ವರೂಪದ್ದಾಗಿತ್ತು. ಎಮ್‌ಐಸಿ ಎಂಬ ವಿಷ ರಸಾಯನದ ದೊಡ್ಡ ಪೀಪಾಯಿಯ ಬಿರಡೆ ಕಿತ್ತು ಬಂದು ಅದರ ಗಾಳಿ ಸುತ್ತೆಲ್ಲ ಹಬ್ಬಿತು. ನಿದ್ದೆಯಲ್ಲೇ ಸತ್ತವರು, ಕೆಮ್ಮುತ್ತ ಚೀರುತ್ತ, ಓಡುತ್ತ ಬಿದ್ದು ಸತ್ತವರು, ಪಕ್ಕದವರನ್ನು ಬದುಕಿಸಲು ಹೋಗಿ ಪ್ರಾಣ ತೆತ್ತವರು, ಒಟ್ಟೂ ಸತ್ತವರ ಸಂಖ್ಯೆ ಮೂರು ಸಾವಿರ ದಾಟಿತ್ತು. ದನ, ಎಮ್ಮೆ, ಹಂದಿ, ಕುರಿ, ಕೋಳಿ, ನಾಯಿ, ಬೆಕ್ಕುಗಳೆಲ್ಲ ಜಿರಳೆಗಳ ಹಾಗೆ ಸತ್ತಿದ್ದವು. ಜಿರಳೆಗಳು ಮಾತ್ರ ಬದುಕುಳಿದಿದ್ದವು. ಮಧ್ಯಾಹ್ನ 11ರ ಸುಮಾರಿಗೆ ದೇಶದ ಏಕೈಕ ಡಿಡಿ ಚಾನೆಲ್‌ನ ಕಪ್ಪುಬಿಳುಪಿನ ಮಬ್ಬು ಚಿತ್ರಗಳ ಮೂಲಕ ಹೆಣಗಳ ರಾಶಿಯ ಆ ಭಯಾನಕ ದೃಶ್ಯಗಳು ಬಿತ್ತರಗೊಂಡಾಗ ಜನ ಬೆಚ್ಚಿದ್ದರು. ದೇಶ– ವಿದೇಶಗಳ ಮಾಧ್ಯಮಗಳು ಧಾವಿಸಿ ಬಂದವು. ಮುಂದಿನ ಮೂರು ವಾರಗಳಲ್ಲಿ ಮೃತರ ಸಂಖ್ಯೆ 15 ಸಾವಿರ ಮೀರಿತ್ತು. ಆ ಮಹಾದುರಂತಕ್ಕೆ ಇಡೀ ಜಗತ್ತು ಕಂಪಿಸಿತ್ತು. 20ನೇ ಶತಮಾನದ ಅತ್ಯಂತ ಭೀಕರ ಔದ್ಯಮಿಕ ದುರಂತವೆಂಬ ಕಪ್ಪುಕಿರೀಟ ಭಾರತದ ಮುಡಿಗೇರಿತು. ಎಲ್ಲ ದೇಶಗಳ ಪಠ್ಯಪುಸ್ತಕಗಳಲ್ಲೂ ಭೋಪಾಲದ ದುರಂತ ಕಥನ ಸೇರ್ಪಡೆಗೊಂಡಿತು.

ಅಪಾಯಕಾರಿ ಕಾರ್ಖಾನೆಗಳನ್ನು ನಡೆಸುವವರು ಅದರಿಂದ ಪಾಠ ಕಲಿತಿರಬೇಕಲ್ಲವೆ? ಸಾಕಷ್ಟು ಸುರಕ್ಷಾ ಕ್ರಮಗಳನ್ನು ಕೈಗೊಂಡಿರಬೇಕಲ್ಲವೆ? ಮತ್ತೆ, ಸ್ಟೈರೀನ್ ದುರಂತ ಸಂಭವಿಸಿದ್ದು ಹೇಗೆ?

ಈಗಿನ ಭದ್ರತಾ ವೈಫಲ್ಯಕ್ಕೆ ಕಾರ್ಖಾನೆಯ ಎಂಜಿನಿಯರ್‌ಗಳು ನಾನಾ ಕಾರಣಗಳನ್ನು ಒಡ್ಡುತ್ತಿದ್ದಾರೆ. ಮೊದಲನೆಯದಾಗಿ, ಕೊರೊನಾ ವೈರಾಣುವಿನ ಕಾರಣದಿಂದಾಗಿ ದೇಶದ ತುಂಬೆಲ್ಲ ಲಾಕ್‌ಡೌನ್ ಘೋಷಣೆ ಇತ್ತಾದ್ದರಿಂದ ಈ 'ಎಲ್‌ಜಿ ಪಾಲಿಮರ್ಸ್' ಹೆಸರಿನ ಕಾರ್ಖಾನೆಯನ್ನು 40 ದಿನಗಳಿಂದ ಮುಚ್ಚಲಾಗಿತ್ತು. ಸುರಕ್ಷಾ ನಿಯಮಗಳ ಪ್ರಕಾರ ಫ್ಯಾಕ್ಟರಿಯ ಎಲ್ಲ ಯಂತ್ರಗಳನ್ನೂ ಬಂದ್ ಮಾಡಲಾಗಿತ್ತು. ಎರಡು ಬೃಹತ್ ಪೀಪಾಯಿಗಳಲ್ಲಿ ತುಂಬಿಸಿಟ್ಟ ಸ್ಟೈರೀನ್ ದ್ರವವನ್ನು ಸದಾಕಾಲ ಶೂನ್ಯದ ಕೆಳಗಿನ 20 ಡಿಗ್ರಿ ಸೆಲ್ಷಿಯಸ್‌ನ ಘೋರ ಚಳಿಯಲ್ಲಿ ಇಟ್ಟಿರಬೇಕಿತ್ತು. ಇಟ್ಟಿದ್ದರು ಕೂಡ. ಆದರೆ ವಿದ್ಯುತ್ ಕೈಕೊಟ್ಟಿತ್ತೋ ಏನಾಗಿತ್ತೊ ಗೊತ್ತಿಲ್ಲ. ಆ ಪೀಪಾಯಿಗಳಲ್ಲಿದ್ದ ದ್ರವ ಮೆಲ್ಲಗೆ ಆವಿರೂಪದಲ್ಲಿ ಒತ್ತಡ ಸ್ಥಿತಿಯಲ್ಲಿತ್ತು. ಎರಡನೆಯ ಹಂತದ ಲಾಕ್‌ಡೌನನ್ನು ತುಸು ಸಡಿಲಗೊಳಿಸಿ, ತೀರ ಅಗತ್ಯದ ಕಾರ್ಖಾನೆಗಳನ್ನು ಮತ್ತೆ ಚಾಲೂ ಮಾಡಲು ಅನುಮತಿ ಸಿಕ್ಕಿತು. ಪ್ಲಾಸ್ಟಿಕ್ ಸಾಮಗ್ರಿಗಳನ್ನು ತಯಾರಿಸುವ ಫ್ಯಾಕ್ಟರಿ ತೀರ ಅಗತ್ಯದ್ದೆಂದು ಅದು ಯಾರು, ಹೇಗೆ, ಏಕೆ ನಿರ್ಧರಿಸಿದರೋ ತನಿಖೆಯ ನಂತರ ಗೊತ್ತಾಗಬೇಕಷ್ಟೆ. ಅಂತೂ ಕಾರ್ಖಾನೆಯನ್ನು ಮತ್ತೆ



ಎಲ್ ಜಿ ಪಾಲಿಮರ್ಸ್ ಘಟಕದಿಂದ ಸೋರಿಕೆಗೊಂಡು ಹೊರಹೊಮ್ಮುತ್ತಿರುವ ವಿಷಾನಿಲ

**ನೆರೆಹೊರೆಯ ಫ್ಯಾಕ್ಟರಿಗಳಲ್ಲಿ ಏನೇನು ಉತ್ಪಾದನೆ ಆಗುತ್ತಿದೆ ಎಂಬುದು ನಮಗೆ ಗೊತ್ತಿರಬೇಕು. ಅಲ್ಲಿ ಎಂಥ ದುರಂತಗಳು ಸಂಭವಿಸಬಹುದು, ಆದರಿಂದ ಬಚಾವಾಗುವ ಕ್ರಮಗಳು ಹೇಗಿರಬೇಕು ಎಂಬುದು ಸುತ್ತಲೂ ವಾಸಿಸುವ ನಾಗರಿಕರಿಗೆ ಗೊತ್ತಿರಬೇಕು. ನಾಗರಿಕರಿಗೆ ಅಷ್ಟೇ ಅಲ್ಲ, ಪಂಚಾಯಿತಿಗೆ, ಪೊಲೀಸರಿಗೆ, ಜಿಲ್ಲಾಧಿಕಾರಿಗೆ, ವೈದ್ಯಾಧಿಕಾರಿಗಳಿಗೆ ಆ ಮಾಹಿತಿ ಲಭ್ಯವಿರಬೇಕು.**